- ಇಲಾಖೆಗಳಲ್ಲಿ ಹೆಚ್ಚುವರಿ ಹುದ್ದೆಗಳನ್ನು ಗುರುತಿಸಿ ಅವುಗಳನ್ನು ಕಡಿತಗೊಳಿಸಲು ವಿಶೇಷ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಹೆಚ್ಚುವರಿ ಸಿಬ್ಬಂದಿಯನ್ನು ಮರು ನೇಮಕಾತಿ ಮಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೇವಾ ನಿಯಮಗಳು ವಿಭಾಗದಲ್ಲಿ ಮರು ನೇಮಕಾತಿ ಕೋಶವನ್ನು ರಚಿಸಲಾಗಿದೆ:
- ವಾಹನ ಚಾಲಕರ ಮತ್ತು ಡಿ ವರ್ಗದ ನೌಕರರುಗಳ ಸೇವೆಯನ್ನು ಹೊರ ಗುತ್ತಿಗೆ ಮುಖಾಂತರ ಪಡೆಯಲು ಎಲ್ಲಾ ಇಲಾಖೆಗಳಿಗೆ ಸೂಚಿಸಲಾಗಿದೆ.
- ಇ-ಆಡಳಿತ ಕ್ರಮಗಳನ್ನು ಜಾರಿಗೊಳಿಸಲಾಗಿದೆ.

ಇ) (ಅ) ದ ಉತ್ತರದಿಂದ ಉದ್ಭವಿಸುವುದಿಲ್ಲ.

1511 (1368) ಶ್ರೀ ರೋಷನ್ ಬೇಗ್ ಆರ್. (ಜಯಮಹಲ್) :- ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜವಾಹರಲಾಲ್ ನೆಹರು ನ್ಯಾಷನಲ್ ಅರ್ಬನ್ ರಿನ್ಯೂವಲ್ ಮಿಷಿನ್ ವತಿಯಿಂದ ಸುಮಾರು 7 ಕೋಟಿ ರೂ.ಗಳ ವೆಚ್ಚದಲ್ಲಿ ಇತಿಹಾಸ ಪ್ರಸಿದ್ಧವಾದ ಮೈಸೂರಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳಾದ ಅರಮನೆ ಇತ್ಯಾದಿಗಳ ಮೂಲ ಶಿಲ್ಪಕಲೆಯನ್ನು ಕಾಪಾಡಲು ಕಾರ್ಯಕ್ರಮ ಹಮ್ಮಿಕೊಂಡಿರುವುದು ನಿಜವೇ;

ಆ) ಇದರ ಸಂಬಂಧದಲ್ಲಿ ಕನ್ಸಲ್‌ಟೆಂಟ್‌ರವರನ್ನು ನೇಮಿಸಲಾಗಿದೆಯೇ;

ಇ) ನೇಮಿಸಿದ್ದಲ್ಲಿ ಅವರು ವರದಿಯನ್ನು ಸಲ್ಲಿಸಿರುವರೇ;

ಈ) ಮೈಸೂರು ಮತ್ತು ಚಾಮುಂಡೇಶ್ವರಿ ಬೆಟ್ಟದಲ್ಲಿರುವ ಪುರಾತನ ಇತಿಹಾಸ ಸ್ಮಾರಕಗಳನ್ನು ಸಂರಕ್ಷಿಸಲು ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಹೌದು. ಜವಾಹರಲಾಲ್ ನೆಹರು ನ್ಯಾಷನಲ್ ಅರ್ಬನ್ ರಿನ್ಯೂವಲ್ ಮಿಷಿನ್ ವತಿಯಿಂದ ಮೈಸೂರಿನ ಹದಿನೈದು ಪಾರಂಪರಿಕ ಕಟ್ಟಡಗಳನ್ನು 20 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೊದಲ ಹಂತದಲ್ಲಿ ಸಂರಕ್ಷಿಸುವ ಪ್ರಾಜೆಕ್ಟ್ ತಯಾರಿಸಲು ಕ್ರಮ ಕೈಗೊಳ್ಳಲಾಗಿದೆ. ಇದರಲ್ಲಿ ಮೈಸೂರು ಅರಮನೆಯ ಸಂರಕ್ಷಣೆಯನ್ನು ಪ್ರಸ್ತಾಪಿಸಿರುವುದಿಲ್ಲ.

ಆ) ಹೌದು. ಭಾರತ ಸರ್ಕಾರದ ಆಂಗ್ಲ ಸಂಸ್ಥೆಯಾದ ಹುಡ್ಕೋ (HUDCO) ಸಂಸ್ಥೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ಅನುಸಾರ ನೇಮಕ ಮಾಡಲಾಗಿದೆ.

ಇ) ಹುಡ್ಕೋ ಸಂಸ್ಥೆಯು ಈ ಆಯ್ದ ಪಾರಂಪರಿಕ ಕಟ್ಟಡಗಳ "ಹೆರಿಟೇಜ್ ಅಸೆಟ್ ಇನ್‌ವೆಂಟರಿ ರಿಪೋರ್ಟ್" ಅನ್ನು ಮಾತ್ರ ಸಲ್ಲಿಸಿದ್ದು ಈ ಪಾರಂಪರಿಕ ಕಟ್ಟಡಗಳ ಸಮಗ್ರ ಸಂರಕ್ಷಣಾ ಯೋಜನೆಯು (DPR) ತಯಾರಿಕೆಯಲ್ಲಿದೆ.

ಈ) ಚಾಮುಂಡಿ ಬೆಟ್ಟದಲ್ಲಿನ ಮಹಾಬಲೇಶ್ವರ ದೇವಸ್ಥಾನವನ್ನು ಟಿ.ವಿ.ಎಸ್. ಸಂಸ್ಥೆಯ ಸಹಭಾಗಿತ್ವದಲ್ಲಿ ಸಂರಕ್ಷಿಸಲಾಗಿದ್ದು ಇಲ್ಲಿಯ ಬೃಹತ್ ನಂದಿ ವಿಗ್ರಹವನ್ನು ಸಾರ್ವಜನಿಕ ಖಾಸಗೀ ಸಹಭಾಗಿತ್ವದಲ್ಲಿ ಪ್ರಾಥಮಿಕ ಸಂರಕ್ಷಣೆ ಮಾಡಲಾಗಿದೆ. ವೆಲಿಂಗ್‌ಟನ್ ಲಾಡ್ಜ್ ಸ್ಮಾರಕವನ್ನು ಇಲಾಖೆಯ ವತಿಯಿಂದ ಸಂರಕ್ಷಿಸಲಾಗಿದ್ದು ಮೈಸೂರು ಅರಮನೆ ಆವರಣದಲ್ಲಿನ ದೇವಸ್ಥಾನಗಳನ್ನು ಅರಮನೆ ಮಂಡಳಿ ವತಿಯಿಂದ ಪ್ರಾಥಮಿಕ ಸಂರಕ್ಷಣೆ ಕೈಗೊಳ್ಳಲಾಗಿದೆ.

1512 (1369) ಶ್ರೀ ರೋಷನ್ ಬೇಗ್ ಆರ್. (ಜಯಮಹಲ್) :-
ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಮಾರು 15 ಕೋಟಿ ರೂ.ಗಳ ವೆಚ್ಚದಲ್ಲಿ ಬೆಂಗಳೂರು ಪಾದಾಚಾರಿಗಳು ರಸ್ತೆ ದಾಟುವ ಸಲುವಾಗಿ ಹಾಗೂ ಅಂದವನ್ನು ಕಾಪಾಡುವ ಸಲುವಾಗಿ ಆಯ್ದ 30 ಸ್ಥಳಗಳಲ್ಲಿ ಮೇಲು ಸೇತುವೆಯನ್ನು ನಿರ್ಮಿಸುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವುದು ನಿಜವಲ್ಲವೆ;